

ಗೊರೊಂಗೊಸ ರಾಷ್ಟ್ರೀಯ ಉದ್ಯಾನದಲ್ಲಿ ಆನೆಗಳ ಹಿಂಡು



ಕಾಗೆ ಗುಬ್ಬಿಯಿಂದಾಚೆಗೆ ಪಕ್ಷಿಲೋಕದ ಪರಿಚಯ ಕಡಿಮೆ. ಅದನ್ನು ತಿಳಿದವನಂತೆ ಆಂಟೋನಿಯೋ, 'ನಿನಗೇನಿಷ್ಟ?' ಎಂದ. 'ಸಿಂಹ, ಆನೆಗಳನ್ನು ತೋರಿಸು' ಎಂದಿದ್ದೆ. 'ನಿಮ್ಮ ಅದೃಷ್ಟ ಪರೀಕ್ಷಿಸೋಣ' ಎಂದು ಬೇರೆ ದಾರಿಗೆ ಜೀಪ್ ತಿರುಗಿಸಿದ.

ಕಚ್ಚಾ ರಸ್ತೆ. ಸುತ್ತ ಮುತ್ತ ಆಳೆತ್ತರದ ಹುಲ್ಲು. ಅಲ್ಲೊಂದು ಇಲ್ಲೊಂದು ದೊಡ್ಡ ಮರ. ಏನೋ ಸುಳಿವು ಸಿಕ್ಕವನಂತೆ ಜೀಪ್ ನಿಲ್ಲಿಸಿದ. 'ನೋಡಿ, ಅಲ್ಲಿ ಆನೆಗಳಿವೆ' ಎನ್ನುತ್ತಾ ಹುಲ್ಲು, ಕುರುಚಲು ಗಿಡ ಗಂಟೆಗಳ ಮೇಲೆ ಜೀಪು ಹತ್ತಿಸತೊಡಗಿದ. ದೂರದಿಂದ ಕಂಡಿದ್ದು ಒಂದೆರಡು ಆನೆಗಳಷ್ಟೇ. ಸಮೀಪಕ್ಕೆ ಹೋಗಿ ನೋಡಿದರೆ, ಬರೋಬ್ಬರಿ ಮೂವತ್ತೆರಡು ಆನೆಗಳು! ಒಂದು ತಿಂಗಳ ಮರಿಯಿಂದ ಹಿಡಿದು ಐವತ್ತರ ವಯಸ್ಸಿನವರೆಗಿನ ಆನೆ ಆ ಹಿಂಡಿನಲ್ಲಿದ್ದವು.

ಆನೆಗಳ ಹಿಂಡಿನ ಬಳಿ ಹೋದ ಆಂಟೋನಿಯೋ, ಜೀಪು ಆಫ್ ಮಾಡಿದ. ನಮ್ಮನ್ನು ನೋಡಿದ ಆನೆಗಳು, ಮರಿಗಳನ್ನು ಹಿಂದೆ ನಿಲ್ಲಿಸಿಕೊಂಡು ಅರ್ಧಚಂದ್ರಾಕಾರದಲ್ಲಿ ನಿಂತವು. ನಮಗೂ ಆನೆಗಳಿಗೂ ಸುಮಾರು 25 ಅಡಿ ದೂರ ಅಷ್ಟೇ! ಎರಡು ಗಂಡಾನೆಗಳು ಜೋರಾಗಿ ಘೀಳಿಟ್ಟವು. ಎಡದಿಂದ ಒಂದು, ಬಲದಿಂದ ಮತ್ತೊಂದು ಜೀಪಿನ ಕಡೆ ನುಗ್ಗಿಬಂದವು. ಸಣ್ಣನೆ ಭೂಕಂಪದ ಅನುಭವ. ನಡುವಿನ ಅಂತರ ಹತ್ತು ಹನ್ನೆರಡು ಅಡಿ ಇರಬಹುದು, ಆಂಟೋನಿಯೋ ಮಾತ್ರ ತಣ್ಣಗೆ ನಮ್ಮನ್ನೇ ನೋಡುತ್ತಿದ್ದ. ಸುಮಾರು 15 ನಿಮಿಷ ದೃಷ್ಟಿಯುದ್ಧ ನಡೆಯಿತು. ಆನೆಗಳು ಅಲ್ಲಿಯೇ ನಿಂತಿದ್ದವು. ಅಷ್ಟರಲ್ಲಿ ಏಳೆಂಟು ಮಂದಿ ವಿದೇಶಿ ಪ್ರಯಾಣಿಕರಿದ್ದ ಇನ್ನೊಂದು ಸಫಾರಿ ಜೀಪು ಇತ್ತಲೇ ಬರುವುದು ಕಾಣಿಸಿತು. ಏನಾಯಿತೆಂದು ನೋಡುವಷ್ಟರಲ್ಲಿ ಆ ಎರಡೂ ಆನೆಗಳು ಮತ್ತೊಂದು ಜೀಪನ್ನು ಅಟ್ಟಿಸಿಕೊಂಡು ಓಡಿದವು. ಆ ಘೀಳು, ಆ ದೂಳು, ಆ ಓಟ ಕಂಡು, ಆ ಜೀಪಿನವ ಹಳ್ಳಕೊಳ್ಳ ಹಾರಿಸಿಕೊಂಡು ರೋಡಿಗೆ ಹೋದ, ನಾವು ಬೇರೆ ದಾರಿಯಲ್ಲಿ ರಸ್ತೆಗೆ ಬಂದೆವು.

ನಂತರದ್ದು ಸಿಂಹದ ಹುಡುಕಾಟ. ಸಿಂಹದ ಜಾಡು ಅಂದಾಜು ಮಾಡುತ್ತ ಒಂದು ಗಂಟೆಗೂ ಹೆಚ್ಚು ಕಾಲ ನಡೆಸಿದ ಹುಡುಕಾಟ ಫಲ ನೀಡಲಿಲ್ಲ.

ಹೋಟೆಲ್‌ಗೆ ವಾಪಸ್ಸು ಬರುವಷ್ಟರಲ್ಲಿ ಸಂಜೆ ಏಳಾಗಿತ್ತು. ನಮ್ಮಲ್ಲಿ ದಾರಿಯಲ್ಲಿ ಹುರಿದ ಕಡಲೆಕಾಯಿ ಮಾರುವಂತೆ, ಅಲ್ಲಿ ಮೊಳದುದ್ದದ ಪ್ಯಾಕೆಟ್ಟಿನಲ್ಲಿ ಉಂಡೆ ಗೋಡಂಬಿ ಮಾರುತ್ತಿದ್ದರು.ಆಹಾ, ಎಂಥ ಅತ್ಯದ್ಭುತ ರುಚಿ! ಅಂತಹ ಗೋಡಂಬಿ ಹಿಂದೆಂದೂ ತಿಂದಿರಲಿಲ್ಲ. ಮನಸ್ಸು ತಂತಾನೇ ಉದ್ಗರಿಸಿತು: 'ಓಲಾ ಆಫ್ರಿಕಾ'.

ಮಪುಟೊ ಒಂದು ಬಂದರು ನಗರ. ಸುಮಾರು ಮೂವತ್ತು ಲಕ್ಷ ಜನರಿರುವ ಆ ನಗರ ಮೊಝಾಂಬಿಕ್‌ನ ರಾಜಧಾನಿ. ಪೋರ್ಚುಗೀಸರ ಶೈಲಿಯ ಸುಂದರ ಕಟ್ಟಡಗಳು, ಅಚ್ಚುಕಟ್ಟಾದ ರಸ್ತೆ, ಸಮುದ್ರ ತಟದಲ್ಲಿರುವ ಸುಂದರ ರೆಸ್ಟೋರೆಂಟ್‌ಗಳು, ಚರ್ಚು ಹಾಗೂ ಮ್ಯೂಸಿಯಂಗಳನ್ನೊಳಗೊಂಡ ನಯನ ಮನೋಹರ ನಗರವದು. ನಾನುಳಿದಿದ್ದ ಹೋಟೆಲ್‌ನ ವಿಶಾಲವಾದ ರೂಮ್‌ನಿಂದಲೇ ಸಮುದ್ರದ ವಿಹಂಗಮ ನೋಟವನ್ನು ಬಾಲ್ಕನಿಯಿಂದ ಸವಿಯಬಹುದಿತ್ತು.

ಮರುದಿನ ಮಪುಟೊದ ವಿಶೇಷಗಳಾದ ಮ್ಯೂಸಿಯಂ, ಹಳೆಯ ರೈಲ್ವೆ ನಿಲ್ದಾಣ, ಇಂಡಿಪೆಂಡೆನ್ಸ್ ಸ್ಟ್ಯಾಚ್ಯು, ಇತ್ಯಾದಿಗಳನ್ನು ನೋಡಿ, ಕಡೆಗೆ ಸ್ಥಳೀಯ ಮಾರುಕಟ್ಟೆ ನೋಡಲು ಹೊರಟೆವು. ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯ ಪ್ರತಿಕೃತಿಯಂಥ ಪೇಟೆಯದು. ಒಳಗೆ ಹಣ್ಣು, ತರಕಾರಿ, ಗೋಡಂಬಿ ಮಳಿಗೆಗಳು. ಬಿರುಸಿನ ವ್ಯಾಪಾರ ನಡೆಯುತ್ತಿತ್ತು. ಮರದ ಸುಂದರ ಕೆತ್ತನೆಗಳು, ಆಟಿಕೆಗಳನ್ನು ನೋಡಿದಾಗ ಚನ್ನಪಟ್ಟಣ ನೆನಪಾಯಿತು.

ಹಿಂತಿರುಗುವ ಸಂದರ್ಭದಲ್ಲಿ ವಿಮಾನದಲ್ಲಿ ಕುಳಿತಾಗ, ಕನ್ನಡ ಹಾಡುಗಳನ್ನು ಕೇಳತೊಡಗಿದೆ. ಹಾಡು ಕೇಳುತ್ತಾ ವಿಮಾನದ ಕಿಟಕಿಗೆ ತಲೆಯೊರಗಿಸಿ ಹೊರಗೆ ನೋಡಿದರೆ ದೂರದಲ್ಲಿ ಮಪುಟೊ! ಮನಸ್ಸು ತಂತಾನೇ ಉದ್ಗರಿಸಿತು. 'ಓಲಾ ಆಫ್ರಿಕಾ... ಒಬ್ರಿಗಾಡೋ'. ಈ ಉದ್ಗಾರಕ್ಕೆ ಪೋರ್ಚುಗೀಸ್ ಭಾಷೆಯಲ್ಲಿ ಅರ್ಥ: ಹಲೋ ಆಫ್ರಿಕಾ... ಥ್ಯಾಂಕ್ಯು.

**ಪ್ರತಿಕ್ರಿಯಿಸಿ: feedback@sudha.co.in**